
# ಆಗ ಲೀಟರ್ ಹಾಲು 7 ರೂಪಾಯಿ!




ಈಚೆಗೆ ಸಾಂಪ್ರದಾಯಿಕ ಆಟ ಆಡಲೆಂದು ಮೇಜಿನ ಡ್ರಾಯರ್ ಅನ್ನು ತೆರೆದಾಗ ನನಗೆ ಕಂಡದ್ದು ನಂದಿನಿ ಹಾಲಿನ ಕವರ್. ಅದರಲ್ಲಿ ಭದ್ರವಾಗಿ ಏನೋ ಮಡಿಚಿಡಲಾಗಿತ್ತು. ತೆರೆದು ನೋಡಿದಾಗ ಕವಡೆ ಕಂಡವು. ನಾವು ಬಯಸಿದ ಸಾಂಪ್ರದಾಯಿಕ ಆಟಕ್ಕೆ ಕವಡೆಗಳು ಸಿಕ್ಕವು. ಆದರೆ, ಅವುಗಳನ್ನು ಸುತ್ತಿಟ್ಟಿದ್ದ ಕವರ್ ವಿಶೇಷವಾಗಿ ಕಂಡಿತ್ತು. ಸೂಕ್ಷ್ಮವಾಗಿ ಗಮನಿಸಿದಾಗ ಅಸಲಿಯತ್ತು ತಿಳಿಯಿತು. ಇದು ಸುಮಾರು 30 ವರ್ಷ ಹಳೆಯದಾದ 1 ಲೀಟರಿನ ನಂದಿನಿ ಹಾಲಿನ ಕವರ್. ಇದರ ಮೇಲೆ 1 ಲೀಟರ್ ಹಾಲಿನ ಬೆಲೆ 7 ರೂಪಾಯಿ ಎಂದು ನಮೂದಿಸಲಾಗಿತ್ತು. ಕಾಲ ಎಷ್ಟು ಬೇಗ ಬದಲಾಗುತ್ತಿದೆ ಎಂಬುದನ್ನು ಇದು ಸೂಕ್ಷ್ಮವಾಗಿ ತಿಳಿಸಿತು. ಇದು ಸರಿಸುಮಾರು 90ರ ದಶಕದ್ದಿರಬಹುದು.

ಸಾಮಾನ್ಯವಾಗಿ ಬಳಸಿ ಬಿಸಾಡುವ ನಂದಿನಿ ಹಾಲಿನ ಕವರ್ ಅನ್ನು ಯಕಶ್ಚಿತ್ ಆಗಿ ಕಾಣುವ ನಾವು ಇದೇ ಹೆಸರಿನ ಹಳೆಯದಾದ ಕವರ್ ಅನ್ನು ಕಂಡಾಗ ಆಗುವ ಭಾವನೆ ಸೋಜಿಗವನ್ನುಂಟು ಮಾಡುತ್ತದೆ. ಹಳೆಯ ನೆನಪಿನಂಗಳಕ್ಕೆ ಕರೆದೊಯ್ಯುತ್ತದೆ. ಜಾಲತಾಣದಲ್ಲಿ ಸಿಗದ ವಸ್ತುಚಿತ್ರವೇ ಇಲ್ಲ ಎನ್ನುವವರಿಗೆ ಈ ವಸ್ತುಚಿತ್ರ ಒಂದು ಸವಾಲೇ ಸರಿ. ಈ ತರಹದ ಎಷ್ಟೋ ವಸ್ತು ವಿಷಯ ನಮ್ಮ ನೆನಪಿನ ಅಂಗಳದಲ್ಲಿ ಆಗೊಮ್ಮೆ ಈಗೊಮ್ಮೆ ಬಂದು ಒಂದು ರೀತಿಯ ಯೋಚನೆಗೆ ಎಡೆಮಾಡಿ ಕೊಡುವುದಂತೂ ನಿಜ.

–ವರುಣ್ ರಾವ್, ಬೆಂಗಳೂರು

# ಮೈನಾ... ಓ ಮೈನಾ...

ಹತ್ತಾರು ವರ್ಷಗಳ ಹಿಂದೆ ಬಹುತೇಕ ಹಳ್ಳಿಗಾಡಿನಲ್ಲಿ ಮೈನಾಗಳ ಸದ್ದು ಕಿವಿಗೆ ಇಂಪು ನೀಡುತ್ತಿತ್ತು. ಆದರೆ ಈಗ ಈ ಪಕ್ಷಿಗಳ ಕುರುಹೇ ಕಾಣದಂತಾಗಿದೆ. ಕಂಡರೂ ಅದು ಅಪರೂಪ. ಹುಳು ಹುಪ್ಪಡಿಗಳನ್ನು ತಿಂದುಕೊಂಡು ಸದ್ದು, ಗದ್ದಲ ಮಾಡಿಕೊಂಡು ಇರುತ್ತಿದ್ದ ಮೈನಾ ಹಕ್ಕಿಗಳು ಗುಂಪು ಗುಂಪಾಗಿ ಕಾಣುತ್ತಿದ್ದವು. ಈ ಹಕ್ಕಿಗಳ ಸಾಮಾನ್ಯ ಹೆಸರು ಕಾಮನ್ ಇಂಡಿಯನ್ ಮೈನಾ. ಕಡು ಹಳದಿ ಬಣ್ಣದ ಕಾಲು ಹಾಗೂ ಕೊಕ್ಕು, ಕಣ್ಣಿನ ಸುತ್ತದ ಹಳದಿ ವೃತ್ತ ಇವುಗಳ ಪ್ರಮುಖ ಐಡೆಂಟಿಟಿ ಮಾರ್ಕ್ ಎನ್ನಬಹುದು. ಇವುಗಳ ಆಹಾರ ಸಾಮಾನ್ಯವಾಗ ಹುಳುಗಳೇ. ಮನೆಯ ಸಂಧಿಯಲ್ಲಿ ಗೂಡುಗಳನ್ನು ಕಟ್ಟುತ್ತಿದ್ದವು. ಗೂಡು ಕಟ್ಟುವ ವಿಚಾರದಲ್ಲಿ ಇವುಗಳ ಬೇಜವಾಬ್ದಾರಿ ವಹಿಸುತ್ತಿದ್ದ ಇವುಗಳ ಮೊಟ್ಟೆಗಳು ಕೆಲವೊಮ್ಮೆ ಬೆಕ್ಕುಗಳ ಪಾಲಾಗುತ್ತಿದ್ದವು. ಮೈನಾ ಹಕ್ಕಿಗಳ ಈ ಚಿತ್ರವು ಸುಮಾರು 12 ವರ್ಷದ ಹಿಂದಿನದ್ದು.

ಮೈನಾಗಳು ಭಾರತ ಉಪ ಖಂಡ ಸೇರಿದಂತೆ ಇರಾನ್, ಇಂಡೋನೇಷ್ಯಾ ಈ ಪ್ರದೇಶದಲ್ಲಿ ವ್ಯಾಪಕವಾಗಿ ಕಂಡು ಬಂದಿದ್ದವು. ಸ್ವಚ್ಛತಾ ಕೆಲಸಗಾರನಂತೆ ಕೆಲಸ ಮಾಡುತ್ತಿದ್ದ ಮೈನಾಗಳು ಈಗ ಬೆಳ್ತಂಗಡಿ ಭಾಗದ ಪಶ್ಚಿಮ ಘಟ್ಟದಲ್ಲಿ ಕಡಿಮೆ ಆಗಿವೆ. ಗೂಡು ಕಟ್ಟಲು ಅನುಕೂಲ ಅಲ್ಲದ ಮನೆಯ ವಿನ್ಯಾಸ, ಮೊಬೈಲ್ ತರಂಗಗಳು ಗುಬ್ಬಚ್ಚಿಗಳ ರೀತಿಯಲ್ಲಿ ಇವುಗಳ ಸಂಖ್ಯೆ ಕಡಿಮೆ ಆಗಲು ಕಾರಣ ಆಗಿದೆ ಎಂದು ಭಾವಿಸಲಾಗಿದೆ.

–ಅರುಣ್ ಕಿಲ್ಲೂರು





# ಗಿಲ್ ಗಿಲ್ ಬಸವಣ್ಣ!

ಮಣ್ಣೆತ್ತಿನ ಅಮಾವಾಸ್ಯೆ ಎಂದಾಕ್ಷಣ ನೆನಪಿಗೆ ಬರುವುದು, 'ಗಿಲ್ ಗಿಲ್ ಬಸವಣ್ಣ ಮನೆ ಮನೆಗೆ ಬಂದ ನೋಡಣ್ಣ' ಅನ್ನುವ ಮಾತು. ಮಣ್ಣೆತ್ತಿನ ಅಮಾವಾಸ್ಯೆ ಕಾಲದಲ್ಲಿ, ಮಣ್ಣಿನಿಂದ ತಯಾರಿಸಿದ ಎತ್ತುಗಳ (ಬಸವನ) ಮೂರ್ತಿ ಪೂಜೆ ಮಾಡುವ ಪದ್ಧತಿ ಉತ್ತರ ಕರ್ನಾಟಕದಲ್ಲಿ ಹಿಂದೆಲ್ಲ ಸಾಮಾನ್ಯವಾಗಿತ್ತು. ಈಗ ಅದು ಕಡಿಮೆ. ಮಣ್ಣೆತ್ತಿನ ಅಮಾವಾಸ್ಯೆ ಮರುದಿನ ಮಕ್ಕಳು ಕೊರಳಲ್ಲಿ ಗಂಟೆ ಕಟ್ಟಿಕೊಂಡು ಮನೆಮನೆಗೆ ಹೋಗಿ ಪೂಜಿಸಿದ ಬಸವಣ್ಣನ ಮೂರ್ತಿಗಳನ್ನು ಪಡೆಯುತ್ತಿದ್ದರು. ಜೊತೆಗೆ ಅಕ್ಕಿ ಜೋಳ ಸಂಗ್ರಹಿಸಿ ಅಡುಗೆ ಮಾಡಿಕೊಂಡು ಹೊಲಕ್ಕೆ ಹೋಗಿ ಪೂಜಿಸಿ, ಊಟ ಮಾಡಿ ಬರುವ ಪದ್ಧತಿ ಇದೆ. ಇಂತಹ ಪದ್ಧತಿಯನ್ನು ಪಾಲಿಸಿದ ಹುಡುಗರನ್ನು ಚಿತ್ರದಲ್ಲಿ ಕಾಣಬಹುದು.

–ರವೀಂದ್ರ ಐ., ಜಡ್ರಾಮಕುಂಟಿ